Feeder Channel from Jayamangali River

*Q.—240 Sri G. T. GOVINDA REDDY (Madhugiri).—

Will the Minister for Public Works be pleased to state :—

(*a*) whether an estimate for the construction of a feeder channel from Jayamangali river to Itagidibbanahalli in Madhugiri Taluk has been prepared ;

(*b*) the action taken by them in this behalf ?

A.—Sri ALUR HANUMANTHAPPA (Deputy Minister for Minor Irrigation).—

(*a*) No.

(*b*) Does not arise in view of reply to clause (*a*).

ಶ್ರೀ ಜಿ. ಟಿ. ಗೋವಿಂದ ರೆಡ್ಡಿ.—ಅಂದಾಜು ತಯಾರಾಗಿಲ್ಲ ಎಂದು ಹೇಳುತ್ತಾ ಇದ್ದೀರಿ, ಸರ್ವೆ ಕೆಲಸ ಆದರೂ ಮಾಡಿಸಿದ್ದೀರಾ ?

†ಶ್ರೀ ಆಲೂರು ಹನುಮಂತಪ್ಪ.—ಅಂತಹ ಪ್ರಪೋಸಲ್ ಯಾವುದೂ ಇಲ್ಲ ಅಂತ ಹೇಳಿ ನನ್ನ ಮುಂದೆ ಇದೆ.

ಶ್ರೀ ಜಿ. ಟಿ. ಗೋವಿಂದ ರೆಡ್ಡಿ.—ಈಗಲಾದರೂ ಸರ್ವೆ ಕೆಲಸ ಪ್ರಾರಂಭ ಮಾಡಿಸುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಅದನ್ನು ಯೋಚನೆ ಮಾಡಲಾಗುತ್ತದೆ.

ಶ್ರೀ ಎಂ. ಎನ್. ರಾಮಣ್ಣ.—ಜಯಮಂಗಲಿ ನದಿಯಿಂದ ಇಟಿಕದಿಬ್ಬನ ಹಳ್ಳಿಗೆ ನೀರನ್ನು ಒದಗಿಸುವುದಕ್ಕೆ ಪ್ರಪೋಸಲ್ ಏನಾದರೂ ಇದೆಯೇ ?

ಶ್ರೀ ಆಲೂರು ಹನುಮಂತಪ್ಪ.—ಸರ್ವೆ ಮಾಡಿಸಬೇಕೆಂದು ಇಲಾಖೆಯವರಿಗೆ ತಿಳಿಸಿದ್ದಾರೆ.

ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ್.—ಕನ್ನಡ ಪ್ರತಿಯಲ್ಲಿ ಮಾಗಡಿ ತಾಲ್ಲೂಕು ಅಂತ ಪ್ರಿಂಟ್ ಆಗಿದೆ ಅದು ಮಾಗಡಿ ತಾಲ್ಲೂಕು ಅಲ್ಲ ಮಧುಗಿರಿ ತಾಲ್ಲೂಕು, ಸ್ವಾಮಿ.

ಶ್ರೀ ಎಂ. ಎಸ್. ಕೃಷ್ಣನ್.—ಜಯಮಂಗಲಿ ನದಿಯಿಂದ ನಾಲೆಯನ್ನು ರಚಿಸಿ ನೀರನ್ನು ಒದಗಿಸಬೇಕೆಂದು ಹೇಳಿ ಅಲ್ಲಿನ ಜನಗಳಿಂದ ಅರ್ಜಿಗಳು ಅನೇಕ ವರ್ಷಗಳಿಂದ ಬರುತ್ತಾ ಇದೆಯಲ್ಲವೇ?

ಶ್ರೀ ಆಲೂರು ಹನುಮಂತಪ್ಪ.—ಮಾನ್ಯ ಸದಸ್ಯರ ಪ್ರಶ್ನೆ ಬಂದಮೇಲೆ ಅವರು ಈ ಸಭೆಯಲ್ಲಿ ಹೇಳಿದ್ದಾರೆ, ಅದು ಪ್ರಾಮುಖ್ಯವಾದುದು ಎಂದು ಸರ್ವೆ ಮಾಡಿಸುತ್ತೇವೆ ಎಂದು ಹೇಳಿದ್ದೇನೆ.

Police Circle

*Q.—385 Sri K. M. THAMMAIAH (Kadur) :—

Will the Minister for Home and Labour be pleased to state.—

(*a*) what is the jurisdiction fixed for creating a Police Circle ;

(*b*) whether any means of conveyance has been provided for each Circle for the use of the Police staff ;

(*c*) if not, whether they intend to provide a jeep for each Circle in the interest of quick discharge of duties by the Police ?

A.—Sri M. V. RAMA RAO (Minister for Home and Labour).—

(*a*) The jurisdiction of a Police Circle comprises on an average 4 or 5 Police Stations and 2 to 5 Police Out Posts.

(*b*) Yes ; to the extent possible the limiting factor being the availability of vehicle with the Department at present.

(*c*) Does not arise in view of reply to clause (*b*).

ಶ್ರೀ ಕೆ. ಎಂ. ತಮ್ಮಯ್ಯ.—(ಆ) ಪ್ರಶ್ನೆಗೆ ಕೊಟ್ಟಿರುವ ಉತ್ತರಕ್ಕನುಗುಣವಾಗಿ ಸರ್ಕಲ್ ಇನ್‌ಸ್ಪೆಕ್ಟರ ಆಫೀಸನ್ನು ಎಲ್ಲ ತೆರೆಯಬೇಕು ಅನ್ನುವ ವಿಚಾರದಲ್ಲಿ ಸರ್ಕಾರದವರ ನೀತಿಯೇನು ?

†ಶ್ರೀ ಎಂ. ವಿ. ರಾಮರಾವ್.—ಆ ನೀತಿಗನುಗುಣವಾಗಿಯೇ ಈಗ ಆ ಸರ್ಕಲ್ ಇನ್‌ಸ್ಪೆಕ್ಟರ ಆಫೀಸನ್ನು ನಿಗದಿಮಾಡಿರುವುದು.

ಶ್ರೀ ಎಂ. ಕೆ. ತಮ್ಮಯ್ಯ.—ಪೋಲೀಸ್ ಇಲಾಖೆಯಲ್ಲಿ ಕೆಲಸಮಾಡತಕ್ಕ ಜನರಿಗೆ ಪ್ರಜೆಗಳ ವಿಚಾರದಲ್ಲಿ ಅಷ್ಟು ಸಹಾನುಭೂತಿ ಇಲ್ಲದಿರುವುದರಿಂದ ಅವರು ಅವರಿಗೆ ಸಾಕಷ್ಟು ವಾಹನ ಸೌಕರ್ಯಗಳಿಲ್ಲವೆಂದು ಹೇಳುತ್ತಿರುವುದರಿಂದ ಜನರಿಗೆ ಬಹಳ ತೊಂದರೆ ಆಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ರಾಮರಾವ್.—ಅವರಿಗೆ ವಾಹನ ಸೌಕರ್ಯಗಳು ಇರಬೇಕೆಂಬುದನ್ನು ನಾನು ಒಪ್ಪುತ್ತೇನೆ. ಅನೇಕ ಸರ್ಕಲ್ ಇನ್‌ಸ್ಪೆಕ್ಟರುಗಳ ಆಫೀಸಿಗೆ ಜೀಪುಗಳನ್ನು ಒದಗಿಸಿದ್ದೇವೆ.

ಶ್ರೀ ಎನ್. ಗೋಪಾಲಗೌಡ.—ಹಾಲೆ ನಮ್ಮಲ್ಲಿ ಎಷ್ಟು ಸರ್ಕಲ್‌ಗಳಿವೆ ? ಆ ಪೈಕಿ ಎಷ್ಟಕ್ಕೆ ಜೀಪುಗಳನ್ನು ಒದಗಿಸಲಾಗಿದೆ ? ಎಷ್ಟು ಸರ್ಕಲ್‌ಗಳಿಗೆ ಇನ್ನೂ ಜೀಪುಗಳನ್ನು ಒದಗಿಸಿಲ್ಲ ?

ಶ್ರೀ ಎಂ. ವಿ. ರಾಮರಾವ್.—ಅದಕ್ಕೆ ಪ್ರತ್ಯೇಕ ಪ್ರಶ್ನೆಯನ್ನು ಕಳುಹಿಸಿದರೆ ಉತ್ತರ ಒದಗಿಸಲಾಗುತ್ತದೆ.

ಶ್ರೀ ಸಿದ್ದಯ್ಯ ಕಾಶೀಮಠ್.—ಅವರು ವಾಹನಗಳ ಸೌಕರ್ಯವಿಲ್ಲದಿದ್ದಾಗ ಅಕ್ರಮವಾಗಿ ಬೇರೆಯವರ ವ್ಯಾನುಗಳನ್ನು ಉಪಯೋಗಿಸುವುದಕ್ಕೆ ಬದಲಾಗಿ ಎನ್. ಇ. ಎಸ್. ನವರ ವಾಹನವನ್ನು ಇವರು ಬಳಸುವುದಕ್ಕೆ ಅವಕಾಶವನ್ನು ಏಕೆ ಮಾಡಿಕೊಡಬಾರದು ?

ಶ್ರೀ ಎಂ. ವಿ. ರಾಮರಾವ್.—ಪೋಲೀಸಿನವರಿಗೆ ವಾಹನದ ಅಗತ್ಯವಿದ್ದಾಗ ಅವರು ಯಾವ ವಾಹನವನ್ನಾದರೂ ಉಪಯೋಗ ಮಾಡಿಕೊಳ್ಳುವುದಕ್ಕೆ ಕಾನೂನಿದೆ.

ಶ್ರೀ ಸೋಲೂರು ಸಿದ್ದಪ್ಪ.—3-4 ತಾಲ್ಲೂಕುಗಳನ್ನು ಒಂದುಗೂಡಿಸಿ ಒಂದು ಸರ್ಕಲ್ ಮಾಡಿರುವುದರಿಂದ ಜನರಿಗೆ ಬಹಳ ತೊಂದರೆ ಆಗುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ರಾಮರಾವ್.—ಆ ತೊಂದರೆ ಏನೆಂಬುದನ್ನು ತಿಳಿಸಿದರೆ ವಿಚಾರಮಾಡುತ್ತೇನೆ.

ಶ್ರೀ ಸೋಲೂರು ಸಿದ್ದಪ್ಪ.—ಜನರು ದೂರುಗಳನ್ನು ಕೊಡಲು ಹೋದಾಗ ಅವರು ಊರಲ್ಲೇ ಇರುವುದಿಲ್ಲ, ಇದರಿಂದ ಬಹಳ ತೊಂದರೆಯಾಗಿದೆ ಎಂಬುದು ತಮ್ಮ ಗಮನಕ್ಕೆ ಬಂದಿಲ್ಲವೇ ?

ಶ್ರೀ ಎಂ. ವಿ. ರಾಮರಾವ್.—ಆ ಅಧಿಕಾರಿಗಳು ಪ್ರತಿದಿನವೂ ಹೆಡ್‌ಕ್ವಾರ್ಟರ್ಸಿನಲ್ಲೇ ಇರಬೇಕೆಂಬ ನೇಮವೇನೂ ಇರುವುದಿಲ್ಲ. ಅವರಿಗೆ ನಾಲ್ಕಾರು ಜೀಪುಗಳನ್ನು ಒದಗಿಸಿದೆ. ಊರುಗಳನ್ನು ಅವರು ಸುತ್ತುತ್ತಲೇ ಇರಬೇಕಾಗುವುದು. ಅದು ಅವರ ಕೆಲಸ.

Sri DIGAMBARA RAO BALWANT RAO.—Is the hon'ble Minister aware of the fact that the police use force to take vehicles belonging to the public for their purpose ?

Sri M. V. RAMA RAO.—No, Sir.

Sri C. K. RAJAIAH SHETTY.—The hon'ble Minister said that they cannot provide jeeps because of costly maintenance of the vehicles. Will he be pleased to order for Motor cycles for their use ?

Sri M. V. RAMA RAO.—In the first instance I have not said that jeeps cannot be provided. On the contrary jeeps are provided and it is the policy of the Government to provide jeep to every circle.

Sri C. K. RAJAIAH SHETTY.—In view of the costly maintenance of the jeep, is it not necessary to provide motor cycles ?

Sri M. V. RAMA RAO.—No, Sir.

ಶ್ರೀ ಕೆ. ಎಂ. ತಮ್ಮಯ್ಯ.—2-3 ತಾಲ್ಲೂಕುಗಳನ್ನು ಒಂದುಗೂಡಿಸಿ ಒಂದು ಸರ್ಕಲ್ಲನ್ನು ಮಾಡಿರುವುದರಿಂದ ಸಬ್‌ಇನ್‌ಸ್ಪೆಕ್ಟರ್ ಮತ್ತು ಇನ್‌ಸ್ಪೆಕ್ಟರುಗಳಿಗೆ ಸಾಕಷ್ಟು ವಾಹನ ಸೌಕರ್ಯಗಳಿಲ್ಲದಿರುವುದರಿಂದ ಆಫೀಸನ್ನು ಮಧ್ಯಪ್ರದೇಶ ನೋಡಿ ಮಾಡಲು ತೊಂದರೆಯೇನಿದೆ ?

Sri M. V. RAMA RAO.—It appears to be a matter of opinion. I have no objection to the hon'ble member holding his opinion.

ಶ್ರೀ ಎ. ಮುನಿಯಪ್ಪ.—ಈ ಇಲಾಖೆಗೆಷ್ಟು ಜೀಪುಗಳು ಬೇಕೆಂದು ಅಂದಾಜಾಗಿದೆ ?

ಶ್ರೀ ಎಂ. ವಿ. ರಾಮರಾವ್.—ಅದಕ್ಕೆ ಹಣವೂ ಬೇಕು, ಜೀಪುಗಳೂ ಬೇಕು.

ಶ್ರೀ ಪಾಟಾಳ್ ನಾಗರಾಜ್.—ಇತ್ತೀಚೆಗೆ ಈ ಇಲಾಖೆಗೆ ಸಿಬ್ಬಂದಿಯನ್ನೂ, ವ್ಯಾನುಗಳನ್ನೂ ಸ್ಟೇಷನ್ನುಗಳನ್ನೂ ಜಾಸ್ತಿ ಮಾಡಿದ್ದಾರೆ. ಆದರೆ ಇವರ ದಕ್ಷತೆಯನ್ನು ಜಾಸ್ತಿ ಮಾಡಿಲ್ಲ. ಮಾಡಿದ್ದರೆ ಆ ಚಾಮರಾಜಪೇಟೆಯ ಮರ್ಡರ್ ಕೇಸಿನ ಪತ್ತೆ ಯಾವ ಹಂತದಲ್ಲಿದೆ ತಿಳಿಸಿ ?

ಅಧ್ಯಕ್ಷರು.—ಈ ವಿಚಾರವನ್ನು ಪೋಲೀಸ್ ಡಿಮ್ಯಾಂಡ್ ಚರ್ಚೆಗೆ ಬಂದಾಗ ಕೇಳಬಹುದು. How does it arise here ? I have disallowed it.

ಶ್ರೀ ಎಸ್. ಗೋಪಾಲಗೌಡ.—ಪೋಲೀಸ್ ಇಲಾಖೆಯವರು ಎಂದರೆ ತಾಲ್ಲೂಕು ಸರ್ಕಲ್ ಇನ್‌ಸ್ಪೆಕ್ಟರ್, ಸಬ್ ಇನ್‌ಸ್ಪೆಕ್ಟರ್ ಯಾವುದಾದರೂ ವಾಹನವನ್ನು ಉಪಯೋಗಿಸಬಹುದು ಎಂದು ಹೇಳಿದ್ದೀರಿ. ಕಾನೂನು ಪ್ರಕಾರ ಅವರಿಗೆ ಕೊಡುವ ಟ್ರಾವಲಿಂಗ್ ಅಲೋಯನ್ಸ್ ಈಗಾಗಲೇ ಗೊತ್ತಾಗಿರುವುದರಿಂದ ಬಸ್‌ನಲ್ಲಿ ಹೋದರೆ ಬಸ್‌ಚಾರ್ಜ್ ಮತ್ತು ಕಾರಿನಲ್ಲಿ ಹೋದರೆ ಅಥವಾ ಬೇರೆ ವಾಹನಗಳನ್ನು ಬಳಸಿದರೆ ಅವರಿಗೆ ಹಣವನ್ನು ಕೊಡುತ್ತೀರಾ ?

ಶ್ರೀ ಎಂ. ವಿ. ರಾಮರಾವ್.—ಪೋಲೀಸ್ ಅಧಿಕಾರಿಗಳು ಅಕ್ರಮವಾಗಿ ಯಾವ ವಾಹನವನ್ನೂ ಉಪಯೋಗಿಸುವುದಕ್ಕೆ ಅವಕಾಶ ಇರತಕ್ಕದ್ದಲ್ಲ. ಅಗತ್ಯ ಬಿದ್ದಾಗ, ಎಂದರೆ, ಉದಾಹರಣೆಗೆ ಎಲ್ಲಾದರೂ ಖೂನಿ ಆಕ್ಸಿಡೆಂಟ್ ಆದಾಗ ಅಲ್ಲಿಗೆ ಹೋಗುವುದಕ್ಕೆ ಯಾವುದಾದರೂ ವಾಹನವನ್ನು ರಿಕ್ವಿಜಿಷನ್ ಮಾಡಿಕೊಂಡು ಹೋಗತಕ್ಕ ಸಂದರ್ಭ ಇರುತ್ತದೆಯೇ ಹೊರತು ಬಸ್ಸಿನಲ್ಲಿ ಹೋಗುವುದಕ್ಕೆ ಕೊಟ್ಟಿರತಕ್ಕ ಅವಕಾಶವನ್ನು ದುರುಪಯೋಗಪಡಿಸಿಕೊಂಡು ಟ್ಯಾಕ್ಸಿಯಲ್ಲಿ ಹೋಗಬಹುದೆಂದು ಅರ್ಥ ಕಲ್ಪಿಸಿಕೊಂಡು ಆ ರೀತಿ ಮಾಡತಕ್ಕದ್ದಲ್ಲ.

Sri AZEEZ SAIT.—In view of the work-load of the Circle Inspectors, will the Hon'ble Minister consider the question of providing vehicles to these Circle Inspectors as in the case of Madras and Maharashtra States ?

Sri M. V. RAMA RAO.—That is a matter on which it will not be possible to say anything just now.

Houses built by Housing Board

*Q.—516. Sri B. P. GANGADHAR (Tumkur) :—

Will the Minister for Health and Housing be pleased to state :—

(*a*) the total number of houses built by Housing Board in Mysore, Bangalore and Tumkur Towns ;

(*b*) if no houses are built in Tumkur town, the reason for the same ?

A.—Sri K. PUTTASWAMY (Minister for Health and Housing). —

(*a*)—

Place		*No. of houses built*
Bangalore	...	4,634
Mysore	...	1,043
Tumkur	...	Nil.

(*b*) Non-availability of sites.